**<u>ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಹಿರೇಕೆರೂರು.</u>**

**<u>ಸಿ.ಸಿ ನಂಬರ್ಃ 1223/2023</u>**

**ಪಿರ್ಯಾದಿಃ** ಸರ್ಕಾರ, ಪ್ರತಿನಿಧಿಸುವವರು,
ಹಂಸಭಾವಿ ಪೊಲೀಸ್ ಠಾಣಾ ಪೋಲೀಸರು.

**ವಿರುದ್ಧ**

**ಆರೋಪಿತರುಃ**

1) ಮಹಮ್ಮದಸಾಬ ತಂದೆ ಹುಸೇನಸಾಬ ಪೀರಸಾಬನವರ ವಯಸ್ಸುಃ 71 ವರ್ಷ, ಉದ್ಯೋಗಃ ಕೃಷಿ,
2) ಹುಸೇನಪೀರಸಾಬ ತಂದೆ ಮಹಮ್ಮದಸಾಬ ಪೀರಸಾಬನವರ, ವಯಸ್ಸುಃ 41 ವರ್ಷ, ಉದ್ಯೋಗಃ ಕೃಷಿ,
3) ಮುಬಾರಕ ಅಹಮ್ಮದ ತಂದೆ ಮಹಮ್ಮದಸಾಬ ಪೀರಸಾಬನವರ, ವಯಸ್ಸುಃ 31 ವರ್ಷ, ಉಃ ಕೃಷಿ,
4) ಫಯಾಜ್ ಅಹಮ್ಮದ ತಂದೆ ಮಹಮ್ಮದಸಾಬ ಪೀರಸಾಬನವರ, ವಯಸ್ಸುಃ 36 ವರ್ಷ, ಉಃ ಕೃಷಿ,
5) ಮುಸ್ತಾಕ @ ಮುಖ್ತಾರ ಆಲಿ ತಂದೆ ಮಹಮ್ಮದಸಾಬ ಪೀರಸಾಬನವರ, ವಯಸ್ಸುಃ 30 ವರ್ಷ, ಉಃ ಕೃಷಿ,
6) ಇಸ್ಮಾಯಿಲ್ ಜಬೀವುಲ್ಲಾ ತಂದೆ ನೂರಅಹಮದ ಪೀರಸಾಬನವರ, ವಯಸ್ಸುಃ 21 ವರ್ಷ, ಉಃ ಕೃಷಿ,
7) ನೂರಾಹಮ್ಮದ್ ತಂದೆ ಗಫಾರಸಾಬ ಪೀರಸಾಬನವರ ವಯಸ್ಸುಃ 54 ವರ್ಷ, ಉದ್ಯೋಗಃ ಕೃಷಿ,

ಎಲ್ಲರೂ ವಾಸಃ ಕಚವಿ, ತಾಃ ಹಿರೇಕೆರೂರು,

**<u>ದೋಷಾರೋಪಣೆ</u>**

ನಾನು ಶ್ರೀಮತಿ ನಾಗರತ್ನಮ್ಮ ದಿವಾಣಿ ಮತ್ತು ಜೆ.ಎಮ್.ಎಫ್,ಸಿ ನ್ಯಾಯಾಲಯ, ಹಿರೇಕೆರೂರು, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

1. ದಿನಾಂಕಃ 26.01.2023 ರಂದು ಸಂಜೆ 6.30 ಗಂಟೆಯ ಸುಮಾರಿಗೆ ಹಂಸಭಾವಿ ಪೊಲೀಸ್ ಠಾಣೆಯ ಸರಹದ್ದಿನಲ್ಲಿ ಬರುವ ಕಚವಿ ಗ್ರಾಮದ ಪಿರ್ಯಾದಿಯ ಜಮೀನಿನಲ್ಲಿ ಆರೋಪಿತರಾದ ನಿಮ್ಮ ಆಕಳು ಗೋವಿನ ಜೋವನ್ನು ತಿನ್ನುವಾಗ ಪಿರ್ಯಾದಿ ಆರೋಪಿತರ ಪೈಕಿ 1ನೇ ಆರೋಪಿಗೆ ಆಕಳನ್ನು ಹೊಡೆದುಕೊಳ್ಳಿರಿ ಎಂದು ಹೇಳಿದ್ದಕ್ಕೆ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮಕೂಟ ಸೇರಿರುವಿರೆಂದು. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ 149 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

2. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 7 ನೇ ಆರೋಪಿತರಾದ ನೀವುಗಳು ಗಲಾಟೆ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಸೇರಿಕೊಂಡು ದೊಂಬಿ ನಡೆಸಿರುವಿರೆಂದು. ಆ ಮೂಲಕ ನಿಮ್ಮ ಈ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ 147 ಸಹವಾಚಕ 149 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

3. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 7 ನೇ ಆರೋಪಿತರಾದ ನೀವುಗಳು ಏಕೋದ್ದೇಶವನ್ನು ಮುಂದುವರೆಸಿಕೊಂಡು ಬಂದು ಪಿರ್ಯಾದಿ ಬೆಳೆದ ಗೋವಿನ ಜೋಳವನ್ನು ಆರೋಪಿತರಾದ ನಿಮ್ಮ ಆಕಳು ತಿನ್ನುತ್ತಿರುವಾಗ ಪಿರ್ಯಾದಿಯು ಆರೋಪಿತರ ಪೈಕಿ 1ನೇ ಆರೋಪಿಗ ಆಕಳನ್ನು ಹೊಡೆದುಕೊಳ್ಳಿ ಎಂದು ಎಂದು ಹೇಳಿದ್ದಕ್ಕೆ 1ನೇ ಆರೋಪಿಯಾದ ನೀವು ಇನ್ನುಳಿದ ಆರೋಪಿತರ ಪೈಕಿ 2 ರಿಂದ 7ನೇದವರನ್ನು ಕರೆಯಿಸಿಕೊಂಡು ಎಲ್ಲರೂ ಸೇರಿ ಕೈಯಿಂದ ಹೊಡೆದು ಕೆಳಗೆ ಕೆಡವಿ ಕಾಲಿನಿಂದ ಒದ್ದು ಒಳನೋವು ಪಡಿಸಿರುತ್ತೀರಿ. ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 149 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

4. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 7 ನೇ ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಮುಂದುವರೆಸಿಕೊಂಡು ಬಂದು ಆರೋಪಿತರ ಪೈಕಿ 1ನೇ ಆರೋಪಿಯಾದ ನೀವು ಪಿರ್ಯಾದಿಗೆ ಏನಲೇ ಸೂಳೆ ಮಗನೇ ನೀ ಯಾರು ಕೇಳಾಕ ಇದೇನು ನಿಮ್ಮ ಅಪ್ಪಂದೇನು ಎಂದು ಅವಾಚ್ಯ

ಶಬ್ದಗಳಿಂದ ಬೈದ್ದು ಇನ್ನುಳಿದ ಆರೋಪಿತರಾದ ನೀವು ಸಹ ಪಿರ್ಯಾದಿಗೆ ಮಿಂಡ್ರಿ ಮಗನಾ ಎಂದು ಅವಾಚ್ಯ ಶಬ್ದಗಳಿಂದ ಬೈದ್ದು ಅವಮಾನಗೊಳಿಸಿರುತ್ತೀರಿ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 149 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

5. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 7 ನೇ ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಮುಂದುವರೆಸಿಕೊಂಡು ಆರೋಪಿತರಾದ ನೀವು ಪಿರ್ಯಾದಿಗೆ ಇವತ್ತು ಉಳಕೊಂಡಿಯಾ ಇನ್ನೊಂದ ಸಾರೆ ಸಿಕ್ಕರೆ ನಿನಗೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತೀರಿ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ 149 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲೆ ಹೋರಿಸಿದ ಆರೋಪಗಳನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿದ್ದರಿಂದ ಅವು ಈ ನ್ಯಾಯಾಲಯದಿಂದ ವಿಚಾರಣೆ ಆಗತಕ್ಕದ್ದು ಅಂತಾ ಆದೇಶ ಮಾಡಿರುತ್ತೇನೆ.

ಹಿರೇಕೆರೂರು ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ

ದಿನಾಂಕಃ 03.09.2025 ಹಿರೇಕೆರೂರು.